**<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ</u>**
**<u>ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 26**
**ಪಿಡಬ್ಲೂಃ 20**

ಸಾಕ್ಷಿದಾರರ ಹೆಸರು : ಅಶೋಕ ಚವ್ಹಾಣ

ತಂದೆಯ ಹೆಸರು : ಗುಂಡಪ್ಪ

ವಯಸ್ಸು : **53** ವರ್ಷ

ಉದ್ಯೋಗ : ಸಿ.ಪಿ.ಐ., ನವನಗರ ವೃತ್ತ, ಬಾಗಲಕೋಟೆ

ವಾಸಸ್ಥಳ : ಬಾಗಲಕೋಟೆ

- - - - -

**<u>ಇಂದು ದಿನಾಂಕ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ನಾನು ದಿನಾಂಕ **31.01.2023** ರಿಂದ **05.02.2024** ರವರೆಗೆ ಹಾಗೂ ದಿನಾಂಕ **28.06.2024** ರಿಂದ **11.10.2025** ರವರೆಗೆ ನಿಡಗುಂದಿ ವೃತ್ತದ ಸಿ.ಪಿ.ಐ. ಎಂದು ಸೇವೆ ಸಲ್ಲಿಸಿದ್ದೇನೆ.

**2)** ಈ ಪ್ರಕರಣದಲ್ಲಿ ದಿನಾಂಕ **04.11.2023** ರಂದು ಈ ಪ್ರಕರಣದ ತನಿಖೆಯನ್ನು ಚಾ.ಸಾ.**24** ರವರಿಂದ ಪಡೆದು, ಕಡತವನ್ನು ಪರಿಶೀಲಿಸಿ, ತನಿಖೆ ಮುಂದುವರೆಸಿ, ಅದೇ ದಿನ ಚಾ.ಸಾ.**1** ರವರು ತೋರಿಸಿದಂತೆ ಚಾ.ಸಾ.**2** ಮತ್ತು ಚಾ.ಸಾ.**3** ರವರ ಸಮಕ್ಷಮ ಮಧ್ಯಾಹ್ನ **01.00** ರಿಂದ **02.00** ಘಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.**2** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**2(ಸಿ)** ಎಂದು

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 26**
**ಪಿಡಬ್ಲೂಃ 20**

ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಘಟನಾ ಸ್ಥಳದಲ್ಲಿ ಪಂಚನಾಮೆಯ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.**3** ಮತ್ತು ನಿ.ಪಿ.**4** ಎಂದು ಗುರುತಿಸಲಾಗಿದೆ. ಅದೇ ಸಮಯದಲ್ಲಿ ಒಂದು ಕಚ್ಚಾ ನಕಾಶೆಯನ್ನು ತಯಾರಿಸಿದ್ದು, ಸಾಕ್ಷಿಯು ಗುರುತಿಸಿದ ನಕಾಶೆಯನ್ನು ನಿ.ಪಿ.**33** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**33(ಎ)** ಎಂದು ಗುರುತಿಸಲಾಯಿತು.

**3)** ಅದೇ ದಿನ ಚಾ.ಸಾ.**1** ರವರ ಪುರವಣಿ ಹೇಳಿಕೆ ಮತ್ತು ಚಾ.ಸಾ.**12** ರಿಂದ ಚಾ.ಸಾ.**15** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ **17.01.2024** ರಂದು ಈ ಪ್ರಕರಣದ ಆರೋಪಿತರಾದ **1** ಮತ್ತು **2** ರವರನ್ನು ಚಾ.ಸಾ.**24** ರವರು ಹಿಡಿದು ತಂದು ನನ್ನ ಮುಂದೆ ಹಾಜರುಪಡಿಸಿದ ಮೇರೆಗೆ ಅವರನ್ನು ದಸ್ತಗಿರಿ ಮಾಡಿ ಅವರ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ. ನಂತರ ಪಂಚರಾದ ಚಾ.ಸಾ.**4** ಮತ್ತು ಚಾ.ಸಾ.**5** ರವರ ಸಮಕ್ಷಮ ಒಂದು ಬಜಾಜ ಕಂಪನಿಯ ಮೋಟರ ಸೈಕಲ ನಂ. ಕೆ.ಎ.**-31/**ಕೆ**-9812** ನೇದನ್ನು ಮತ್ತು ಎರಡು ಗರಗಸಗಳನ್ನು ಹಾಗೂ ಒಂದು ಕಟ್ಟಿಗೆ ಕಾವಿಯ ಕೊಡಲಿ ಮತ್ತು ಒಂದು ಖಾಲಿ ಗೊಬ್ಬರದ ಚೀಲವನ್ನು **1** ನೇ ಆರೋಪಿಯು ಹಾಜರುಪಡಿಸಿದ ಮೇರೆಗೆ ಜಪ್ತಿ ಪಂಚನಾಮೆಯಡಿ ಜಪ್ತಿ ಮಾಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಜಪ್ತಿ

ಪಂಚನಾಮೆಯನ್ನು ಈಗಾಗಲೇ ನಿ.ಪಿ.**7** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**7(**ಸಿ**)** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಎರಡು ಭಾವಚಿತ್ರಗಳನ್ನು ತೆಗೆದಿದ್ದು, ಸಾಕ್ಷಿ ಗುರುತಿಸಿದ ಭಾವಚಿತ್ರಗಳನ್ನು ಈಗಾಗಲೇ ನಿ.ಪಿ.**8** ಮತ್ತು ನಿ.ಪಿ.**9** ಎಂದು ಗುರುತಿಸಲಾಗಿದೆ. ಭಾವಚಿತ್ರದಲ್ಲಿರುವ ದ್ವಿಚಕ್ರ ವಾಹನವನ್ನು ಸಾಕ್ಷಿಯು ಗುರುತಿಸಿದ್ದು, ಎರಡು ಗರಗಸ, ಕೊಡಲಿ ಮತ್ತು ಖಾಲಿ ಗೊಬ್ಬರದ ಚೀಲವನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.**1** ರಿಂದ ಮು.ಮಾ.**4** ಎಂದು ಗುರುತಿಸಲಾಗಿದೆ. ಅದೇ ರೀತಿ **2** ನೇ ಆರೋಪಿ ಮೌನೇಶನ ಕಡೆಯಿಂದ ಒಂದು ಸ್ಯಾಮಸಂಗ ಕಂಪನಿಯ ಮೊಬೈಲನ್ನು ವಶಪಡಿಸಿಕೊಂಡು ನಿ.ಪಿ.**7** ಪಂಚನಾಮೆಯಡಿ ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇನೆ. ಸಾಕ್ಷಿಯು ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ನ್ಯಾಯಾದಲ್ಲಿರುವ ಸ್ಯಾಮಸಂಗ ಕಂಪನಿಯ ಮೊಬೈಲನ್ನು ಗುರುತಿಸಿದ್ದು, ಅದನ್ನು ಈಗ ಮು.ಮಾ.5 ಎಂದು ಗುರುತಿಸಲಾಯಿತು.

**4)** ಅದೇ ದಿನ ಆರೋಪಿತರು ತೋರಿಸಿದ ಗುನ್ಹಾ ಸ್ಥಳವನ್ನು ಪಂಚರಾದ ಚಾ.ಸಾ.**4** ಮತ್ತು ಚಾ.ಸಾ.**5** ರವರ ಸಮಕ್ಷಮ ನಿ.ಪಿ.**10** ರ ಪ್ರಕಾರ ಪಂಚನಾಮೆ ಜರುಗಿಸಿದ್ದು, ಸಾಕ್ಷಿಯು ಸಹಿಯನ್ನು ನಿ.ಪಿ.**10(**ಸಿ**)**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 26**
**ಪಿಡಬ್ಲೂಃ 20**

ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ಸಾಕ್ಷಿಯು ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.**11** ಮತ್ತು ನಿ.ಪಿ.**12** ಎಂದು ಗುರುತಿಸಲಾಗಿದೆ.

**5)** ಅದೇ ದಿನ ಫಿರ್ಯಾದಿ ಮತ್ತು ಚಾ.ಸಾ.**12** ರಿಂದ ಚಾ.ಸಾ.**15** ರವರ ಪುರವಣಿ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಆರೋಪಿತರನ್ನು ಸೂಕ್ತ ಬೆಂಗಾವಲಿನಲ್ಲಿ ರಿಮ್ಯಾಂಡ ಅರ್ಜಿಯೊಂದಿಗೆ ನ್ಯಾಯಾಂಗ ವಶಕ್ಕೆ ನೀಡಿರುತ್ತೇನೆ.

**6)** ಅದೇ ದಿನ ಚಾ.ಸಾ.**24** ಪಿ.ಎಸ್.ಐ. ಅವರು **5** ನೇ ಆರೋಪಿಯನ್ನು ಹಾಜರುಪಡಿಸಿದ ಮೇರೆಗೆ **5** ನೇ ಆರೋಪಿಯನ್ನು ದಸ್ತಗಿರಿ ನಿಯಮಾವಳಿಯ ಪ್ರಕಾರ ದಸ್ತಗಿರಿ ಮಾಡಿ ಆತನ ವಿಚಾರಣೆ ಮಾಡಿರುತ್ತೇನೆ. ಆತನ ಸ್ವಖುಷಿ ಹೇಳಿಕೆಯನ್ನು ಪಡೆದಿರುತ್ತೇನೆ. ಆತನ ಸ್ವಖುಷಿ ಹೇಳಿಕೆಯಲ್ಲಿ ಈ ಪ್ರಕರಣದ **1** ರಿಂದ **4** ನೇ ಆರೋಪಿತರು ಕಳುವು ಮಾಡಿದ ಶ್ರೀಗಂಧದ ಕಟ್ಟಿಗೆಯ ತುಂಡುಗಳನ್ನು ಕಳೆದ ವರ್ಷ ಶ್ರಾವಣ ಮಾಸದಲ್ಲಿ ಖರೀದಿ ಮಾಡಿದ್ದು, ನಂತರ ತನ್ನ ಬಜಾಜ ಮೋಟರ ಸೈಕಲ್ ನಂ.ಕೆ.ಎ.**28/**ಇ.ಡಬ್ಲ್ಯೂ**-3760** ನೇದ್ದರ ಮೇಲೆ ಇಟ್ಟುಕೊಂಡು ಹೋಗಿ **6** ನೇ ಆರೋಪಿಗೆ ಮಾರಾಟ ಮಾಡಿದ ಬಗ್ಗೆ ಹೇಳಿರುತ್ತಾನೆ. ಆತನು ತನ್ನ ಸ್ವಖುಷಿ ಹೇಳಿಕೆಯಲ್ಲಿ ತನ್ನ ಜೊತೆ ಬಂದರೆ ರೂ.**9500/-** ಹಣ, ಮೋಟರ

ಸೈಕಲ್ ಮತ್ತು ಬೆಂಕೋ ಕಂಪನಿಯ ಕೀಪ್ಯಾಡ ಮೊಬೈಲನ್ನು ಹಾಜರುಪಡಿಸುವುದಾಗಿ ಹೇಳಿರುತ್ತಾನೆ. ಸದರಿ ಸ್ವಖುಷಿ ಹೇಳಿಕೆಯ ಭಾಗವನ್ನು ನಿ.ಪಿ.**34** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**34**(ಎ) ಎಂದು, ಆರೋಪಿಯ ಸಹಿಯನ್ನು ನಿ.ಪಿ.**34**(ಬಿ) ಎಂದು ಗುರುತಿಸಲಾಯಿತು.

**7)** ನಂತರ ಆರೋಪಿಯ ಸ್ವಖುಷಿ ಹೇಳಿಕೆಯ ಆಧಾರದ ಮೇಲೆ ಚಾ.ಸಾ.**6** ಮತ್ತು ಚಾ.ಸಾ.**7** ರವರನ್ನು ಕರೆಯಿಸಿಕೊಂಡು **5** ನೇ ಆರೋಪಿ ಕರೆದುಕೊಂಡು ಹೋದ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಸ್ಥಳವು ಇಂಡಿ ತಾಲೂಕಿನ ಹಿರೇರೂಗಿ ಗ್ರಾಮದ ಆರೋಪಿಯ ಮನೆ ಇರುತ್ತದೆ. ಸದರಿ ಮನೆಯಲ್ಲಿ ಆರೋಪಿಯು ರೂ.**500/-** ಮುಖಬೆಲೆಯ **19** ನೋಟುಗಳನ್ನು, ಬೆಂಕೋ ಕಂಪನಿಯ ಕೀಪ್ಯಾಡ ಮೊಬೈಲ ಮತ್ತು ಬಜಾಜ ಕಂಪನಿಯ ಪ್ಲ್ಯಾಟಿನಾ ಮೋಟರ ಸೈಕಲ್ ನಂ.ಕೆ.ಎ-**28**/ಇ.ಡಬ್ಲೂ.-**3760** ಗಳನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ನಿ.ಪಿ.**13** ರ ಜಪ್ತಿ ಪಂಚನಾಮೆಯಡಿ ಜಪ್ತಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ.**13**(ಸಿ) ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ ತೆಗೆದ ಎರಡು ಭಾವಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.**14** ಮತ್ತು ನಿ.ಪಿ.**15** ಎಂದು ಗುರುತಿಸಲಾಗಿದೆ.

**8)** ನಿ.ಪಿ.**13** ರ ಅಡಿಯಲ್ಲಿ ವಶಪಡಿಸಿಕೊಳ್ಳಲಾದ ರೂ.**500/-** ಮುಖಬೆಲೆಯ **19** ನೋಟುಗಳ ಗುರುತಿಸುವಿಕೆಗೆ **5** ನೇ ಆರೋಪಿ ಪರ ವಕೀಲರು ತಕರಾರು ಇಲ್ಲವೆಂದು ತಿಳಿಸಿದ ಮೇರೆಗೆ ಸದರಿ ನೋಟುಗಳನ್ನು ಒಟ್ಟಾಗಿ ಮು.ಮಾ.**6** ಎಂದು ಗುರುತಿಸಲಾಯಿತು. ಅದೇ ರೀತಿ ಈಗ ನ್ಯಾಯಾಲಯದಲ್ಲಿರುವ ಬೆಂಕೋ ಕಂಪನಿಯ ಕೀಪ್ಯಾಡ ಮೊಬೈಲನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ಈಗ ಮು.ಮಾ.**7** ಎಂದು ಗುರುತಿಸಲಾಯಿತು. ನಿ.ಪಿ.**15** ರ ಭಾವಚಿತ್ರದಲ್ಲಿರುವ ಬಜಾಜ ಕಂಪನಿಯ ಮೋಟರ ಸೈಕಲನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಈ ಹಂತದಲ್ಲಿ ದ್ವಿಚಕ್ರ ವಾಹನವನ್ನು ಗುರುತಿಸಲು ತಕರಾರು ಇಲ್ಲವೆಂದು **5** ನೇ ಆರೋಪಿ ಪರ ವಕೀಲರು ತಿಳಿಸಿದ ಮೇರೆಗೆ ಅದನ್ನು ಮು.ಮಾ.**8** ಎಂದು ಗುರುತಿಸಲಾಯಿತು. ನಿ.ಪಿ.**13** ರ ಪಂಚನಾಮೆಯನ್ನು ಸಾಯಂಕಾಲ **05.00** ರಿಂದ **07.00** ಘಂಟೆಯ ಸಮಯದಲ್ಲಿ ಪಂಚರ ಸಮಕ್ಷಮ ಜರುಗಿಸಿರುತ್ತೇನೆ.

**9)** 5 ನೇ ಆರೋಪಿಯು ತನ್ನ ಸ್ವಖುಷಿ ಹೇಳಿಕೆಯಲ್ಲಿ ಸೂಚಿಸಿದ **6** ನೇ ಆರೋಪಿಯನ್ನು ಹಿಡಿದು ತರಲು ಚಾ.ಸಾ.**24** ಪಿ.ಎಸ್.ಐ. ಅವರಿಗೆ ಸೂಚಿಸಿರುತ್ತೇನೆ. ಅದೇ ದಿನ ಚಾ.ಸಾ.**20** ಮತ್ತು ಚಾ.ಸಾ.**22** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ **18.01.2024** ರಂದು **6** ನೇ

ಆರೋಪಿಯನ್ನು ಚಾ.ಸಾ.**24** ರವರು ಹಾಜರುಪಡಿಸಿರುತ್ತಾರೆ. ಸದರಿ ಆರೋಪಿಯನ್ನು ವಿಚಾರಿಸಿದಾಗ ಆತನು ತನ್ನ ಸ್ವಖುಷಿ ಹೇಳಿಕೆಯಲ್ಲಿ ತನ್ನನ್ನು ಕರೆದುಕೊಂಡು ಹೋದರೆ ಗಂಧದ ಕಟ್ಟಿಗೆಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಇಟ್ಟ ಸ್ಥಳವನ್ನು ತೋರಿಸುವುದಾಗಿ ಹೇಳಿರುತ್ತಾನೆ. ಸದರಿ ಹೇಳಿಕೆಗೆ ಸಂಬಂಧಿಸಿದ ಭಾಗವನ್ನು ನಿ.ಪಿ.**35** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**35(**ಎ**)** ಎಂದು, ಆರೋಪಿಯ ಸಹಿಯನ್ನು ನಿ.ಪಿ.**35(**ಬಿ**)** ಎಂದು ಗುರುತಿಸಲಾಯಿತು.

**10)** ಸ್ವಖುಷಿ ಹೇಳಿಕೆಯ ಆಧಾರದ ಮೇಲೆ ಚಾ.ಸಾ.**8** ಮತ್ತು ಚಾ.ಸಾ.**9** ರವರನ್ನು ಕರೆಸಿಕೊಂಡು ಆರೋಪಿ ತೋರಿಸಿದ ಸ್ಥಳವಾದ ಕಾಖಂಡಕಿ ಗ್ರಾಮದ ಹದ್ದಿಯಲ್ಲಿರುವ ಆರೋಪಿಯ ಜಮೀನಿನ ಪತ್ರಾಸ ಶೆಡ್ಡಿನ ಹತ್ತಿರ ಬಂದು ಆತನು ಸದರಿ ಶೆಡ್ಡಿನಲ್ಲಿಟ್ಟಿದ್ದ ರೂ.**500/-** ಮುಖಬೆಲೆಯ ಒಟ್ಟು **146** ನೋಟುಗಳನ್ನು ಹಾಗೂ ಭರತ ಕಾರ್ಬನ್ ಕಂಪನಿಯ ಕೀಪ್ಯಾಡ ಮೊಬೈಲನ್ನು ನಮಗೆ ಹಸ್ತಾಂತರಿಸಿದ್ದು, ಹಣ ಮತ್ತು ಮೊಬೈಲನ್ನು ನಿ.ಪಿ.**16** ಪಂಚನಾಮೆಯಡಿ ವಶಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.**16** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**16(**ಬಿ**)** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ತೆಗೆದ

ಭಾವಚಿತ್ರಗಳನ್ನು ಈಗಾಗಲೇ ನಿ.ಪಿ.**17** ಮತ್ತು ನಿ.ಪಿ.**18** ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಭಾರತ ಕಂಪನಿಯ ಕೀಪ್ಯಾಡ ಮೊಬೈಲನ್ನು ಗುರುತಿಸಿದ್ದು, ಅದನ್ನು ಮು.ಮಾ.**9** ಎಂದು ಗುರುತಿಸಲಾಯಿತು. **6** ನೇ ಆರೋಪಿ ಪರ ವಕೀಲರು ರೂ.**500/-** ಮುಖಬೆಲೆಯ ಒಟ್ಟು **146** ನೋಟುಗಳನ್ನು ಮುದ್ದೆಮಾಲುಗಳಾಗಿ ಗುರುತಿಸುವಿಕೆಗೆ ತಕರಾರು ಇಲ್ಲವೆಂದು ತಿಳಿಸಿದ ಮೇರೆಗೆ ಸದರಿ ನೋಟುಗಳನ್ನು ಮು.ಮಾ.**10** ಎಂದು ಗುರುತಿಸಲಾಯಿತು. ಸದರಿ ನಿ.ಪಿ.**16** ರ ಪಂಚನಾಮೆಯನ್ನು ಬೆಳಿಗ್ಗೆ **10.30** ರಿಂದ ಮಧ್ಯಾಹ್ನ **12.00** ಘಂಟೆಯ ಸಮಯದವರೆಗೆ ಜರುಗಿಸಿರುತ್ತೇನೆ.

**11)** ಅದೇ ದಿನ ಫಿರ್ಯಾದಿಯ ಹಾಗೂ ಚಾ.ಸಾ.**12** ರಿಂದ ಚಾ.ಸಾ.**15** ರವರ ಪುರವಣಿ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಆರೋಪಿಯನ್ನು ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ಈ ಮೇಲೆ ಜಪ್ತಾದ ಮುದ್ದೆಮಾಲುಗಳನ್ನು ಪಿ.ಎಫ್. ಸಂಖ್ಯೆ **5/2024** ರ ಅಡಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**12)** ದಿನಾಂಕ **31.01.2024** ರಂದು **6** ನೇ ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಮೂರು ದಿನಗಳ ಪೋಲೀಸ ಅಭಿರಕ್ಷೆಗೆ ಕೋರಿ ಮಾನ್ಯ

ನ್ಯಾಯಾಲಯಕ್ಕೆ ಅರ್ಜಿ ಬರೆದು ನಮ್ಮ ಅಭಿರಕ್ಷೆಯ ಅಡಿಯಲ್ಲಿ ಪಡೆದು ಹೆಚ್ಚಿನ ವಿಚಾರಣೆ ಜರುಗಿಸಿರುತ್ತೇನೆ. ದಿನಾಂಕ **31.01.2024** ರಂದು ಚಾ.ಸಾ.**10** ಮತ್ತು ಚಾ.ಸಾ.**11** ರವರನ್ನು ಠಾಣೆಗೆ ಹಾಜರುಪಡಿಸಿಕೊಂಡು, ಅವರೊಂದಿಗೆ ಆರೋಪಿ ಹೇಳಿದ ತೆಲಂಗಾಣ ರಾಜ್ಯದ ಮೋಮಿನಪೇಠಗೆ ದಿನಾಂಕ **01.02.2024** ರಂದು ತಲುಪಿ **6** ನೇ ಆರೋಪಿ ತಾನು ಶ್ರೀಗಂಧದ ಕಟ್ಟಿಗೆಗಳನ್ನು ಮಾರಾಟ ಮಾಡಿದ ಯು.ಟಿ.ಸಿ. ಯುನಿವರ್ಸಲ್ ಟ್ರೇಡಿಂಗ ಮಿಲ್ ತೋರಿಸಿ ಅದೇ ಮಿಲ್ ಗೆ ಶ್ರೀಗಂಧದ ಕಟ್ಟಿಗೆಗಳನ್ನು ಮಾರಿರುವ ಕುರಿತು ತಿಳಿಸಿರುತ್ತಾನೆ. ಅಲ್ಲಿ ಚಾ.ಸಾ.**10** ಮತ್ತು ಚಾ.ಸಾ.**11** ರವರ ಸಮಕ್ಷಮ ಬೆಳಿಗ್ಗೆ **10.00** ರಿಂದ **11.30** ಘಂಟೆಯವರೆಗೆ ನಿ.ಪಿ.**19** ರ ಪ್ರಕಾರ ಪಂಚನಾಮೆ ಜರುಗಿಸಿ, ಭಾವಚಿತ್ರ ತೆಗೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ.**19** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**19(**ಸಿ**)** ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ಈಗಾಗಲೇ ನಿ.ಪಿ.**20** ಮತ್ತು ನಿ.ಪಿ.**21** ಎಂದು ಗುರುತಿಸಲಾಗಿದೆ.

**13)** ದಿನಾಂಕ **02.02.2024** ರಂದು **6** ನೇ ಆರೋಪಿ ಸಾಬಣ್ಣ ಇವರ ಜಮೀನಿನ ಆರ್.ಟಿ.ಸಿ.ಗಳನ್ನು ಪಡೆದಿರುತ್ತೇನೆ. ಸದರಿ ಆರ್.ಟಿ.ಸಿ.ಗಳು ಎಂಟು ಪುಟಗಳನ್ನು ಹೊಂದಿದ್ದು, ಅವುಗಳನ್ನು ಒಟ್ಟಾರೆಯಾಗಿ

ನಿ.ಪಿ.**36** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**36**(ಎ) ಎಂದು ಗುರುತಿಸಲಾಯಿತು. ದಿನಾಂಕ **04.02.2024** ರಂದು ಪಂಚನಾಮೆಗಳ ಕಾಲಕ್ಕೆ ಫೋಟೋ ತೆಗೆದ ಫೋಟೋಗ್ರಾಫರನ ಕಡೆಯಿಂದ ದೃಢೀಕರಣ ಪ್ರಮಾಣಪತ್ರ ಪಡೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ಈಗಾಗಲೇ ನಿ.ಪಿ.**22** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**22**(ಬಿ) ಎಂದು ಗುರುತಿಸಲಾಯಿತು.

**14)** ನಂತರ ನನಗೆ ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಚಾ.ಸಾ.**25** ರವರಿಗೆ ವಹಿಸಿರುತ್ತೇನೆ. ಪುನಃ ದಿನಾಂಕ **28.06.2024** ರಂದು ಚಾ.ಸಾ.**25** ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ಮುಂದುವರೆದ ತನಿಖೆ ಕೈಗೊಂಡಿರುತ್ತೇನೆ. ನಂತರ ಚಾ.ಸಾ.**18** ರವರಿಗೆ ವಿಚಾರಣೆಗೆ ಬಂದು ಹಾಜರಾಗಲು ನೋಟೀಸ್ ನೀಡಿರುತ್ತೇನೆ. ದಿನಾಂಕ **12.09.2024** ರಂದು ಚಾ.ಸಾ.**18** ರವರು ಠಾಣೆಗೆಹಾಜರಾಗಿ ತನ್ನ ಹೇಳಿಕೆ ನೀಡಿರುತ್ತಾನೆ. ಅದೇ ದಿನ ಪ್ರಕರಣದಲ್ಲಿ ಸಾಕಷ್ಟು ಸಾಕ್ಷಿ ಪುರಾವೆಗಳು ಲಭ್ಯವಿದ್ದ ಕಾರಣ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ. ಈಗ ನ್ಯಾಯಾಲಯದಲ್ಲಿರುವ ಆರೋಪಿತರನ್ನು ಸಾಕ್ಷಿ ಗುರುತಿಸಿರುತ್ತಾರೆ. ಚಾ.ಸಾ.**1** ನನ್ನ ಮುಂದೆ ನಿ.ಪಿ.**5** ಮತ್ತು ನಿ.ಪಿ.**6** ರಂತೆ ಪುರವಣಿ ಹೇಳಿಕೆಗಳನ್ನು ಮತ್ತು ಚಾ.ಸಾ.**18** ರವರು ನಿ.ಪಿ.**29** ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ.

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 26**
**ಪಿಡಬ್ಲೂಃ 20**

**ಪಾಟೀ ಸವಾಲುಃ ಶ್ರೀ ಜಿ.ವಿ.ಜಿ., ವಕೀಲರಿಂದ 1 ಮತ್ತು 3 ನೇ ಆರೋಪಿತರ ಪರವಾಗಿಃ**

**15)** ಚಾ.ಸಾ.**4** ರವರು ಸಿದ್ದನಾಥ ತಾಂಡಾದವರು ಇರುತ್ತಾರೆ ಎಂದರೆ ಸರಿ. ನಮ್ಮ ಕೊಲ್ಹಾರ ಠಾಣೆಯಿಂದ ಸಿದ್ದನಾಥ ತಾಂಡಾ **6-7** ಕಿ.ಮೀ.ನ ಅಂತರದಲ್ಲಿದೆ. ನಮ್ಮ ಸಿ.ಪಿ.ಐ. ಕಛೇರಿಯಿಂದ ಸಿದ್ದನಾಥ ತಾಂಡಾವು **30-35** ಕಿ.ಮೀ.ನ ಅಂತರದಲ್ಲಿದೆ. ಚಾ.ಸಾ.**5** ಕೃಷ್ಣಾ ಇವರು ಹಳೆರೊಳ್ಳಿ ತಾಂಡಾದವರು ಇರುತ್ತಾರೆ. ಸದರಿ ತಾಂಡಾವು ನಮ್ಮ ಸಿ.ಪಿ.ಐ. ಕಛೇರಿಯಿಂದ **30-35** ಕಿ.ಮೀ. ಅಂತರದಲ್ಲಿದೆ. ಸದರಿ ಪಂಚರಿಗೆ ನಾನು ಪಂಚರಾಗಲು ನೋಟೀಸ್ ನೀಡಿರುತ್ತೇನೆ. ಸದರಿ ಪಂಚರು ನಮ್ಮ ಕೊಲ್ಹಾರ ಠಾಣೆಯಲ್ಲಿದ್ದಾಗ ನಾನೇ ಅವರಿಗೆ ನೋಟೀಸ್ ನೀಡಿರುತ್ತೇನೆ. ನಾನೇ ನೋಟೀಸ್ ಜಾರಿ ಮಾಡಿಸಿದ ಬಗ್ಗೆ ಕಡತದಲ್ಲಿ ಯಾವುದೇ ದಾಖಲೆ ಇಲ್ಲವೆಂದರೆ ಸರಿಯಲ್ಲ.

**16)** ಮು.ಮಾ.**1** ರಿಂದ **4** ಗಳನ್ನು ಪಿ.ಎಸ್.ಐ. ಅವರೇ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿತರು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಮು.ಮಾ.**8** ರ ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಲ್ಲ ಎಂದರೆ ಸರಿ. ಮು.ಮಾ.**1,** ಮು.ಮಾ.**2** ಮತ್ತು ಮು.ಮಾ.**4** ಗಳು ಎಲ್ಲ ಕಡೆ ಲಭ್ಯವಿರುತ್ತವೆ ಎಂದರೆ ಸರಿಯಲ್ಲ. ಸದರಿ ಮುದ್ದೆಮಾಲುಗಳನ್ನು ನಾವೇ ಸೃಷ್ಠಿಸಿ ಕಡತಕ್ಕೆ

ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ. **1** ನೇ ಆರೋಪಿಯ ಕಡೆಯಿಂದ ಯಾವುದೇ ವಸ್ತುಗಳನ್ನು ಜಪ್ತಿ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಪಿ.ಎಂ.ಬಿ., ವಕೀಲರಿಂದ 6 ನೇ ಆರೋಪಿ ಪರವಾಗಿಃ</u>**

**17)** ನಾನು ಪ್ರಸ್ತುತ ಪ್ರಕರಣದಲ್ಲಿ ತನಿಖೆಯನ್ನು ಕೈಗೊಳ್ಳುವ ಪೂರ್ವದಲ್ಲಿ ಅರಣ್ಯ ಇಲಾಖೆಯಲ್ಲಿ ದಾಖಲಾದ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ವಿಷಯ ಪ್ರಸ್ತುತ ಪ್ರಕರಣದಲ್ಲಿ ದೋಷಾರೋಪಣೆ ಸಲ್ಲಿಸುವ ಪೂರ್ವದಲ್ಲಿ ಸದರಿ ಪ್ರಕರಣ ದಾಖಲಾದ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿ. ಅರಣ್ಯ ಇಲಾಖೆಯಲ್ಲಿ ದಾಖಲಾದ ಪ್ರಕರಣಕ್ಕೂ ಮತ್ತು ನಮ್ಮ ಠಾಣೆಯಲ್ಲಿ ದಾಖಲಾದ ಎಫ್.ಐ.ಆರ್.ಗೂ ಅಂದಾಜು ನಾಲ್ಕು ತಿಂಗಳ ಅಂತರವಿದೆ. ಫಿರ್ಯಾದಿಯು ನಮ್ಮ ಠಾಣೆಯಲ್ಲಿ ಫಿರ್ಯಾದಿ ನೀಡಿದಾಗ ಅದರಲ್ಲಿ ತಾನು ಮೊದಲು ಅರಣ್ಯ ಇಲಾಖೆಗೆ ದೂರು ಕೊಟ್ಟಿದ್ದು, ಅವರು ಯಾವುದೇ ಕ್ರಮ ಕೈಗೊಳ್ಳದ ಕಾರಣ ನಮ್ಮ ಠಾಣೆಯಲ್ಲಿ ದೂರು ಕೊಟ್ಟ ಬಗ್ಗೆ ನನಗೆ ಕಂಡುಬಂದಿತು. ಅದಕ್ಕೆ ಸಂಬಂಧಿಸಿದಂತೆ ನಾನು ಈ ಪ್ರಕರಣದಲ್ಲಿ ಅರಣ್ಯ ಇಲಾಖೆಯವರನ್ನು

ಸಾಕ್ಷಿದಾರರೆಂದು ನಮೂದಿಸಿಲ್ಲ ಎಂದರೆ, ಸಾಕ್ಷಿಯು ಆ ಪ್ರಕರಣ ಬೇರೆ, ಈ ಪ್ರಕರಣ ಬೇರೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಅರಣ್ಯ ಇಲಾಖೆಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅರಣ್ಯ ಇಲಾಖೆಯವರನ್ನು ವಿಚಾರಣೆ ಮಾಡಿಲ್ಲ ಎಂದರೆ ನಿಜ. ಗುನ್ಹಾ ಸ್ಥಳದಲ್ಲಿ ಬಿದ್ದ ಕಟ್ಟಿಗೆಗಳನ್ನು ಎಫ್.ಎಸ್.ಎಲ್.ಗೆ ಕಳಿಸಿಲ್ಲ. ಅದೇ ರೀತಿ ನಮ್ಮ ತನಿಖೆಯಲ್ಲಿ ಕೃತ್ಯ ಎಸಗಿದವರ ಚಲನವಲನಗಳನ್ನು ತಿಳಿಯಲು ಡಾಗ್ ಸ್ಕ್ವಾಡ ಬಳಸಿಲ್ಲ. **6** ನೇ ಆರೋಪಿಯನ್ನು ದಸ್ತಗಿರಿ ಮಾಡಿಕೊಂಡು ಬರಲು ಚಾ.ಸಾ.**24** ರವರನ್ನು ನೇಮಿಸಿದ್ದು, ಅವರೇ **6** ನೇ ಆರೋಪಿಯನ್ನು ದಸ್ತಗಿರಿ ಮಾಡಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಾನು ಚಾ.ಸಾ.**24** ರವರಿಗೆ ದಿನಾಂಕ **17.01.2024** ರಂದು ಆದೇಶಿಸಿದ್ದು, ಅವರು ದಿನಾಂಕ **18.01.2024** ರಂದು **6** ನೇ ಆರೋಪಿಯನ್ನು ಕಾಖಂಡಕಿ ಗ್ರಾಮದ ಆರೋಪಿಯ ಮನೆಯಿಂದ ಹಿಡಿದುಕೊಂಡು ಬಂದು ಅದೇ ದಿನ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿಯ ಚಹರಾ ಪಟ್ಟಿಯನ್ನು ವಿವರಿಸುವ ದಾಖಲೆಯನ್ನು ಕಡತಕ್ಕೆ ಅಳವಡಿಸಿರುವುದಿಲ್ಲ. **6** ನೇ ಆರೋಪಿಯನ್ನು ಚಾ.ಸಾ.**24** ರವರು ದಸ್ತಗಿರಿ ಮಾಡದೇ ಇದ್ದರೂ ಆತನನ್ನು ಅಕ್ರಮವಾಗಿ ಬಂಧಿಸಿರುತ್ತೇವೆ ಎಂದರೆ ಸರಿಯಲ್ಲ.

**18)** 5 ನೇ ಆರೋಪಿಯು ಎಷ್ಟು ತೂಕದ ಕಟ್ಟಿಗೆಗಳನ್ನು **6** ನೇ ಆರೋಪಿಗೆ ಕೊಟ್ಟಿದ್ದಾನೆ ಎನ್ನುವ ಬಗ್ಗೆ ಆತನ ಸ್ವಇಚ್ಛಾ ಹೇಳಿಕೆಯಲ್ಲಿ

ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ಹೈದ್ರಾಬಾದನ ಯುನಿವರ್ಸಲ್ ಟ್ರೇಡಿಂಗ ಕಂಪನಿಗೆ ಎಷ್ಟು ಪ್ರಮಾಣದ ಕಟ್ಟಿಗೆಗಳನ್ನು **6** ನೇ ಆರೋಪಿ ಮಾರಾಟ ಮಾಡಿದ್ದ ಎನ್ನುವ ಬಗ್ಗೆ ದಾಖಲೆ ಇಲ್ಲ. ಸಾಕ್ಷಿಯು ಮುಂದುವರೆದು ಅದರ ಬಗ್ಗೆ ಯುನಿವರ್ಸಲ್ ಟ್ರೇಡಿಂಗ ಕಂಪನಿಯ ಮಾಲೀಕನ ಮಗನಾದ ಚಾ.ಸಾ.**18** ತಮ್ಮ ಹೇಳಿಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚಾ.ಸಾ.**18** ರವರ ಹೇಳಿಕೆಯಲ್ಲೂ ಕೂಡ ಕಟ್ಟಿಗೆಯ ಪ್ರಮಾಣದ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಅದೇ ರೀತಿ **6** ನೇ ಆರೋಪಿಯು ಹೈದ್ರಾಬಾದನ ಯುನಿವರ್ಸಲ್ ಟ್ರೇಡಿಂಗ ಕಂಪನಿಗೆ ಕಟ್ಟಿಗೆಗಳನ್ನು ಮಾರಾಟ ಮಾಡಿದ ಬಗ್ಗೆ ತೋರಿಸಲು ಸಿಸಿಟಿವಿ ಫೂಟೇಜಗಳನ್ನು ಹಾಜರುಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ, ಸಾಕ್ಷಿಯು ಅಲ್ಲಿ ಯಾವುದೇ ಸಿಸಿಟಿವಿ ಅಳವಡಿಸಿರಲಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಆರೋಪಿತರು ಸಂಭಾಷಣೆ ಮಾಡಿದ ಸಿ.ಡಿ.ಆರ್. ಸಂಗ್ರಹಿಸಿಲ್ಲ ಎಂದರೆ ಸರಿ. **6** ನೇ ಆರೋಪಿಯು ಕಟ್ಟಿಗೆಗಳನ್ನು ಮಾರಿದ ಬಗ್ಗೆ ಯಾವುದೇ ಸೂಕ್ತ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ತನಿಖೆಯಲ್ಲಿ ಜಪ್ತಾದ ಹಣವು ಆರೋಪಿತನ ಸ್ವಂತ ಹಣವಾಗಿದ್ದು, ಅದು ಕಟ್ಟಿಗೆಯನ್ನು ಮಾರಾಟ ಮಾಡಿದ ನಂತರ ಬಂದ ಹಣವಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಎಲ್ಲ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 26**
**ಪಿಡಬ್ಲೂಃ 20**

ಆರೋಪಿತರಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಅವರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.